ದಿನಾಂಕ : 03.01.2023 ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 5 ಮತ್ತು 6ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಮ್ಮ ತಂದೆ ಈ ದಾವೆಯನ್ನು ದಾಖಲಿಸುವಾಗ ಸಲ್ಲಿಸಿರುವ ವಾದಪತ್ರದಲ್ಲಿನ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಈ ದಾವೆಗೆ 5 ಮತ್ತು 6ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಬರೆಸಲಾದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. 1 ರಿಂದ 4ನೇ ಪ್ರತಿವಾದಿಗಳು 5ನೇ ಪ್ರತಿವಾದಿಯ ಹೆಸರಿಗೆ ಸಾಮಾನ್ಯ ಅಧಿಕಾರ ಪತ್ರವನ್ನು ಹಾಗೂ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, ಅದರ ಆಧಾರದ ಮೇಲೆ 5ನೇ ಪ್ರತಿವಾದಿ, 6ನೇ ಪ್ರತಿವಾದಿಯ ಹೆಸರಿಗೆ ನಿಪಿ-4 ರಂತೆ ಕ್ರಯಪತ್ರ ಬರೆದುಕೊಟ್ಟಿರುವುದಾಗಿ 5 ಮತ್ತು 6ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದಾರೆ ಎಂದರೆ ಸಾಕ್ಷಿಯು ಅದು ಸೃಷ್ಟಿತ ದಾಖಲೆ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-4 ದಾಖಲೆಯಲ್ಲಿ 45,25,000/- ರೂಗಳು ಕ್ರಯದ ಮೌಲ್ಯವೆಂದು ಕಾಣಿಸಲಾಗಿದೆ ಎನ್ನುವುದು ನಿಜ.

ನಿಪಿ-4 ಕ್ರಯಪತ್ರವನ್ನು ದಿನಾಂಕ 27.12.2010 ರಂದು ನೋಂದಣಿಗಾಗಿ ಹಾಜರುಪಡಿಸಿದಾಗ 6ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆನ್ನುವ ಕುರಿತು ಪ್ರಮಾಣಪತ್ರವನ್ನು ಹಾಜರುಪಡಿಸಿಲ್ಲವೆಂದು ಹಾಗೂ ಸ್ಕೆಚ್ ಹಾಜರುಪಡಿಸಿಲ್ಲವೆಂದು ಕ್ರಯತಪ್ರದ ನೋಂದಣಿಯನ್ನು ವಿಲೆ ಇಡಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಿದ ನಂತರ ದಿನಾಂಕ 30.04.2021 ರಂದು ಕ್ರಯಪತ್ರವನ್ನು ನೋಂದಣಿ ಮಾಡಲಾಗಿದೆ ಎಂದರೆ ಸಾಕ್ಷಿಯು ನೋಂದಣಿಯಾಗಿದೆ,

ಆದರೆ ಅದು ಸೃಷ್ಟಿತ ದಾಖಲೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲೆ ಸೃಷ್ಟಿತವಾದದ್ದು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ? ಎಂದರೆ ಸಾಕ್ಷಿಯು ನಮ್ಮ ಹೆಸರಿಗೆ ನೋಂದಣಿಯಾಗುವ ಕಾಲಕ್ಕೆ ನಿಪಿ-4 ದಾಖಲೆ ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳುವ ಸಮಯಕ್ಕೆ 1 ನೇ ಪ್ರತಿವಾದಿಯ ಹೆಸರಿಗೆ ಆಗಿದ್ದಂತಹ ಪಹಣಿ, ಋಣಭಾರ ಪ್ರಮಾಣಪತ್ರ, ವಂಶವೃಕ್ಷ ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿದ್ದೆವು. ನೀವು ಸದರಿ ವಂಶವೃಕ್ಷ ಹಾಗೂ ಋಣಭಾರ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದೀರಾ? ಎಂದರೆ ಸಾಕ್ಷಿಯು ತನ್ನ ಪರ ಹಾಜರುಪಡಿಸಲಾದ ಹಾಗೂ ನಿಶಾನೆಪಡಿಸಲಾದ ದಾಖಲೆಗಳನ್ನು ನೋಡಿ ಪಹಣಿ ಮಾತ್ರ ಹಾಜರುಪಡಿಸಲಾಗಿದೆ ಎಂದು ನುಡಿಯುತ್ತಾರೆ.

ನನ್ನ ತಂದೆಯ ಹೆಸರಿಗೆ ನೋಂದಣಿಯಾಗಿದೆ ಎಂದು ಹೇಳಲಾದ ಕ್ರಯಪತ್ರವನ್ನು ಮಾಡಿಕೊಳ್ಳುವ ಸಮಯಕ್ಕೆ ನನ್ನ ತಂದೆ 1 ನೇ ಪ್ರತಿವಾದಿಯಿಂದ ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಿಪಿ-4 ರಂತೆ 6 ನೇ ಪ್ರತಿವಾದಿಯ ಹೆಸರಿಗೆ ಆದಂತಹ ಕ್ರಯಪತ್ರದಲ್ಲಿ ಕ್ರಯದ ಮೊಬಲಗನ್ನು 45,25,000/- ರೂಗಳ ಬದಲಾಗಿ 60,00,000/- ರೂಗಳು ಎಂದು ಕಾಣಿಸಲಾಗಿದ್ದ ಸಂಬಂಧ ದಿನಾಂಕ 20.05.2011 ರಂದು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯ ಹೆಸರಿಗೆ ನೀಡಿದ್ದ ಸಾಮಾನ್ಯ ಅಧಿಕಾರ ಪತ್ರದ ಆಧಾರದ ಮೇರೆಗೆ 5 ನೇ ಪ್ರತಿವಾದಿ, 6 ನೇ ಪ್ರತಿವಾದಿಯ ಹೆಸರಿಗೆ ಈಗ ನಿಮಗೆ ತೋರಿಸಲಾದ ದಾಖಲೆಯಂತೆ ತಿದ್ದುಪಡಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ

ದಾಖಲೆಯನ್ನು ನೋಡಿ ಸದರಿ ದಾಖಲೆಯನ್ನು ಬರೆದುಕೊಟ್ಟಿದ್ದಾರೆ, ಆದರೆ ಅದು ಸೃಷ್ಟಿತ ದಾಖಲೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು.

ನಿಡಿ-3 ಸೃಷ್ಟಿತ ದಾಖಲೆ ಎನ್ನುವ ಕುರಿತು ನನ್ನ ವಾದಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಾಗಲೀ ಬರೆಸಲಾಗಿದೆಯೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. ನನಗೆ ಈ ದಾವೆಯಲ್ಲಿನ ವಾದಪತ್ರ ಹಾಗೂ ನನ್ನ ಪರ ಹಾಜರುಪಡಿಸಲಾದ ದಾಖಲೆಗಳು ಹಾಗೂ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ವಿಚಾರಗಳ ಕುರಿತು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯವಿದೆ ಎನ್ನುವುದು ನಿಜ. ನನ್ನ ಪರ ನಿಶಾನೆಪಡಿಸಲಾದ ದಾಖಲಾತಿಗಳ ಪೈಕಿ ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇನೆ ಎಂದು ಸಾಬೀತುಪಡಿಸುವ ಸಂಬಂಧ ನನ್ನ ತಂದೆಯ ಹೆಸರಿನಲ್ಲಿರುವ ಅಥವಾ ನನ್ನ ಹೆಸರಿನಲ್ಲಿರುವ ಯಾವುದೇ ಕಂದಾಯ ದಾಖಲೆಗಳು ಇರುವುದಿಲ್ಲ.

ನಿಪಿ-12 ರಿಂದ ನಿಪಿ-17 ಭಾವಚಿತ್ರಗಳನ್ನು ನೋಡಿದಾಗ ಅದು ದಾವಾ ಸ್ವತ್ತಿನಲ್ಲೇ ಸ್ವಾಧೀನದಲ್ಲಿರುವುದಾಗಿ ಕಾಣುವುದಿಲ್ಲ ಎನ್ನುವುದು ನಿಜ. ಈ ದಾವೆಗಾಗಿ ನಿಪಿ-12 ರಿಂದ ನಿಪಿ-18 ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನನ್ನ ತಂದೆ 5 ಮತ್ತು 6ನೇ ಪ್ರತಿವಾದಿಗಳಿಗೆ ನೋಟಿಸನ್ನು ನೀಡಿದ ವಿಚಾರ ನನಗೆ ಗೊತ್ತಿಲ್ಲ. ಸದರಿ ನೋಟಿಸ್‌ಗೆ 5 ಮತ್ತು 6ನೇ ಪ್ರತಿವಾದಿಗಳು ಈಗ ನನಗೆ ತೋರಿಸಲಾದ ದಾಖಲೆಯಂತೆ ಪ್ರತ್ಯುತ್ತರ

ನೋಟಿಸ್ ಕೊಟ್ಟಿದ್ದರು ಎನ್ನುವುದು ನಿಜ. ಸಾಕ್ಷಿಗೆ ತೋರಿಸಲಾದ ದಾಖಲೆಯು ದಿನಾಂಕ 21.08.2012 ರ ಜವಾಬು ನೋಟಸ್ ಆಗಿದ್ದು, ಅದನ್ನು ನಿಡಿ-4 ಎಂದು ಹಾಗೂ ಅದಕ್ಕೆ ಸಂಬಂಧಿಸಿದ ಅಂಚೆ ರಶೀದಿಯನ್ನು ನಿಡಿ-5 ಎಂದು ಗುರುತಿಸಲಾಯಿತು.

ನಾನು 6 ನೇ ಪ್ರತಿವಾದಿಯನ್ನು ನೋಡಿಲ್ಲ. ನನ್ನ ತಂದೆಯವರು ಸಹ ಅವರನ್ನು ನೋಡಿಲ್ಲ. ನಿಪಿ-1 ರ ಆಧಾರದ ಮೇಲೆ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಾಗಿ ಹೇಳುತ್ತಿರುವುದು ಸುಳ್ಳು ಎನ್ನುವುದು ಹಾಗೂ ನಿಪಿ-1 ಸೃಷ್ಟಿತ ದಾಖಲೆ ಎನ್ನುವುದು ಸರಿಯಲ್ಲ. 6 ನೇ ಪ್ರತಿವಾದಿ ನಿಪಿ-4 ರ ಆಧಾರದ ಮೇಲೆ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ತಂದೆಗಾಗಲೀ ಅಥವಾ ನನಗಾಗಲೀ ಯಾವುದೇ ಹಕ್ಕು ಅಥವಾ ಸ್ವಾಧೀನ ಇಲ್ಲ ಎನ್ನುವುದು ಸರಿಯಲ್ಲ.

5 ಮತ್ತು 6 ನೇ ಪ್ರತಿವಾದಿಗಳಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ 1 ರಿಂದ 4 ನೇ ಪ್ರತಿವಾದಿಗಳಿಂದ ನಿಪಿ-1 ರಂತೆ ಒಂದು ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು, ಹಿತಾಸಕ್ತಿ ಹಾಗೂ ಸ್ವಾಧೀನ ಇಲ್ಲದಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

7 ನೇ ಪ್ರತಿವಾದಿಯ ಪರ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ದಿನಾಂಕ : 03.01.2023 ಓ.ಎಸ್ ನಂ.495/2012 ರಲ್ಲಿ
ಪಿ.ಡಬ್ಲ್ಯೂ-1(ಹರೀಶ್ ಪೂನಂ)

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.